ಹೊಳೆನರಸೀಪುರದ ಅಪರ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ.

ಸಿ.ಸಿ. ನಂಃ **415/2020**

| | | | |
|---|---|---|---|
| ಸಾಕ್ಷಿಯ ಹೆಸರು | ಃ ಮಧು ಕುಮಾರ್ | ಸಿ.ಡಬ್ಲ್ಯೂ | ಃ 03 |
| ತಂದೆ ಹೆಸರು | ಃ ಓಬೇಗೌಡ | ಪಿ.ಡಬ್ಲ್ಯೂ | ಃ 05 |
| ವಯಸ್ಸು | ಃ 53 ವರ್ಷ | ಪ್ರಮಾಣೀಕರಿಸಿದ ದಿಃ | 28/01/2026 |
| ವೃತ್ತಿ | ಃ ಕೃಷಿ | | |
| ವಾಸ | ಃ ದೇವರ ಮುದ್ದನ ಹಳ್ಳಿ ಗ್ರಾಮ | | |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ.ಯವರಿಂದಃ

ನನಗೆ ಈ ಪ್ರಕರಣದ ಬಗ್ಗೆ ಏನು ತಿಳಿದಿಲ್ಲ. ನಾನು ಯಾವುದೇ ಮಹಜರ್ ಗೆ ಸಹಿ ಮಾಡಿಲ್ಲ ಆದರೆ ಪೊಲೀಸರು ನನ್ನಿಂದ ಒಂದು ದಾಖಲೆಗೆ ಠಾಣೆಯಲ್ಲಿ ಸಹಿ ಪಡೆದಿರುತ್ತಾರೆ. ಸ್ಥಳ ಮತ್ತು ಅಮಾನತ್ ಮಹಜರ್ ನಿ ಪಿ 3 ನ್ನು ತೋರಿಸಲಾಗಿ ಅದರಲ್ಲಿ ಅವರು ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಸಹಿಯನ್ನು ನಿ ಪಿ 3(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿ ಪಿ 5 ಮತ್ತು ನಿ ಪಿ 6 ರಲ್ಲಿ ತಮ್ಮನ್ನು ಗುರುತಿಸಿರುತ್ತಾರೆ ಆದರೆ ಸದರಿ ಪೋಟೋಗಳನ್ನು ಎಲ್ಲಿ ತೆಗೆದಿದ್ದು ಎಂದು ನೆನಪಿಲ್ಲ ಎನ್ನುತ್ತಾರೆ.

(ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ. ಸ್ಥಳ ಮತ್ತು ಅಮಾನತ್ ಮಹಜರ್ ನ್ನು ಪರಿಶಿಲೀಸಿ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ - ಮಾನ್ಯ ಎ.ಪಿ.ಪಿ. ರವರಿಂದಃ

ದಿನಾಂಕ 16.08.2020 ರಂದು ಮದ್ಯಾಹ್ನ 2.00 ರಿಂದ 3.00 ಗಂಟೆಗೆ ಪೊಲೀಸರು, ಚಾ ಸಾ 1 ರವರು ಚಾ ಸಾ 5 ಮತ್ತು ನನ್ನ ಸಮಕ್ಷಮ ಹಾಸನ ಮೈಸೂರು ರಸ್ತೆಯಲ್ಲಿರುವ ಗ್ರಾಮಾಂತರ ಪೊಲೀಸ್ ಠಾಣೆಯ ನೇರದಲ್ಲಿರುವ ಮಹಾಲಕ್ಷ್ಮಿ ಸರ್ವಿಸ್ ಸೆಂಟರ್ ಬಳಿಯ ಟಾರ್ ರಸ್ತೆಯ ಬಳಿ ಸ್ಥಳ ಮಹಜರ್ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ಆಗ ಚಾ ಸಾ 1 ರವರು ಅಲ್ಲಿಯೇ ಇದ್ದ ಒಂದು ಕಲ್ಲನ್ನು ತಂದು ಅದೇ ಕಲ್ಲಿನಿಂದ ಆರೋಪಿಗಳು ಚಾ ಸಾ 1 ರವರ ಮೇಲೆ ಹಲ್ಲೆ ಮಾಡಿದ್ದು ಎಂದು ನಮ್ಮ ಸಮಕ್ಷಮ ಪೊಲೀಸರಿಗೆ ಹಾಜರುಪಡಿಸಲಾಗಿ, ಪೊಲೀಸರು ಅದನ್ನು ಪರಿಶೀಲಿಸಲಾಗಿ ಅದು ಹಿಡಿ ಗಾತ್ರ ಸೈಜು ಕಲ್ಲಿನ ಚೂರಾಗಿದ್ದು ಅದನ್ನು ಪೊಲೀಸರು ಮುಂದಿನ ತನಿಖೆಗಾಗಿ ಅಮಾನತ್ ಪಡಿಸಿಕೊಂಡರು ಎಂದರೆ ನನಗೆ ಗೊತ್ತಿಲ್ಲ.

2. ಆರೋಪಿಗಳು ನನಗೆ ಪರಿಚಯಸ್ಥರಾದರಿಂದ ಅವರೊಂದಿಗೆ ರಾಜೀ ಮಾಡಿಕೊಂಡ ಕಾರಣ ಅವರಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಪರ ಪಾಟಿ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲಃ

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.**

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ,

ಹೊಳೆನರಸೀಪುರ